# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 914 (1116) |
| ಮಾನ್ಯ ಸದಸ್ಯರ ಹೆಸರು | ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದವರು | ಮಾನ್ಯ ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 12.03.2026 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಅಬಕಾರಿ ಇಲಾಖೆಯಲ್ಲಿ ಹೊಸ ಮದ್ಯದ ಅಂಗಡಿಗಳಿಗೆ (CL-9) ಪರವಾನಗಿ ನೀಡುವುದನ್ನು ತಡೆಹಿಡಿದ 33 ವರ್ಷಗಳಷ್ಟು ಹಳೆಯದಾದ ನಿಯಮವು ಪ್ರಸ್ತುತ ಕಾಳಸಂತೆ ಮತ್ತು ಭ್ರಷ್ಟಾಚಾರಕ್ಕೆ ಮೂಲ ಕಾರಣವಾಗಿರುವುದು ಸರ್ಕಾರಕ್ಕೆ ಗಮನಕ್ಕೆ ಬಂದಿದೆಯೇ; ಜನಸಂಖ್ಯೆ ಮತ್ತು ನಗರೀಕರಣಕ್ಕೆ ಅನುಗುಣವಾಗಿ ಈ ನಿಯಮವನ್ನು ಸಡಿಲಗೊಳಿಸಿ, ಪಾರದರ್ಶಕವಾಗಿ ಪರವಾನಗಿ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ; | 1992ನೇ ಸಾಲಿನಿಂದ ರಾಜ್ಯಾದ್ಯಂತ ಸಿಎಲ್-2, ಸಿಎಲ್-9 ಮತ್ತು ಪಬ್ (ಸ್ವತಂತ್ರ ಆರ್.ವಿ.ಬಿ) ಸನ್ನದುಗಳನ್ನು ಮಂಜೂರಾತಿ ನೀಡುತ್ತಿರುವುದಿಲ್ಲ. 2025-26ನೇ ಸಾಲಿನ ಆಯವ್ಯಯ ಭಾಷಣದಲ್ಲಿ "ಖಾಲಿ ಅಥವಾ ಲಭ್ಯವಿರುವ ಮದ್ಯದ ಪರವಾನಗಿಗಳನ್ನು ಪಾರದರ್ಶಕ ಎಲೆಕ್ಟ್ರಾನಿಕ್ ಹರಾಜಿನ ಮೂಲಕ ಹಂಚಿಕೆ ಮಾಡಲು ಪ್ರಸ್ತಾಪಿಸಲಾಗಿರುತ್ತದೆ. ಈ ಸಂಬಂಧ ಅಬಕಾರಿ ನಿಯಮಗಳಿಗೆ ಸೂಕ್ತ ತಿದ್ದುಪಡಿಯನ್ನು ತಂದು ದಿನಾಂಕ:03-11-2025ರಂದು ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.<br><br>CL-9 ಸನ್ನದುಗಳನ್ನು ಒಳಗೊಂಡಂತೆ ಸ್ಥಗಿತಗೊಂಡಿರುವ ಸನ್ನದುಗಳನ್ನು ಇ-ಹರಾಜು ಮಾಡಲು ದಿನಾಂಕ:19-12-2025ರಂದು ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ದಿನಾಂಕ:03-11-2025 ಮತ್ತು 19-12-2025ರ ಅಧಿಸೂಚನೆಗಳನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಹಾಗೂ ಧಾರವಾಡ ಪೀಠಗಳಲ್ಲಿ ರಿಟ್ ಅರ್ಜಿಗಳು ದಾಖಲಾಗಿದ್ದು, ಮಾನ್ಯ ನ್ಯಾಯಾಲಯವು ಸದರಿ ಅಧಿಸೂಚನೆಗಳಿಗೆ ತಡೆಯಾಜ್ಞೆಯನ್ನು ನೀಡಿದ್ದು, ಪ್ರಸ್ತುತ ಪ್ರಕರಣಗಳು ನ್ಯಾಯಲಯದಲ್ಲಿ ಬಾಕಿ ಇರುತ್ತವೆ.<br><br>ಪ್ರಸ್ತುತ ರಾಜ್ಯದಲ್ಲಿ ಸಿಎಲ್-4, ಸಿಎಲ್-6ಎ, ಸಿಎಲ್-7, ಮತ್ತು ಇತರ ಸನ್ನದುಗಳನ್ನು ಮಂಜೂರು ಮಾಡಲಾಗುತ್ತಿರುತ್ತದೆ.<br><br>ಸಾರ್ವಜನಿಕರಿಗೆ ಹಾಗೂ ಸನ್ನದುದಾರರಿಗೆ ಅಬಕಾರಿ ಇಲಾಖೆಯಿಂದ ನೀಡಲಾಗುತ್ತಿರುವ ಸೇವೆಗಳನ್ನು ತ್ವರಿತವಾಗಿ ಮತ್ತು ನಿಗದಿತ ಸಮಯಕ್ಕೆ ಒದಗಿಸಲು ಹಾಗೂ ಪಾರದರ್ಶಕತೆಯನ್ನು ಹೊಂದುವ ಉದ್ದೇಶದಿಂದ ಅಬಕಾರಿ ಸೇವೆಗಳನ್ನು ಸಕಾಲ ವ್ಯಾಪ್ತಿಗೆ ಸೇರ್ಪಡೆಗೊಳಿಸಲಾಗಿರುತ್ತದೆ.<br><br>ಅಬಕಾರಿ ಸೇವೆಗಳನ್ನು 2019ನೇ ಸಾಲಿನಿಂದ Version-1 ಆವೃತ್ತಿಯಲ್ಲಿ ಆನ್‌ಲೈನ್‌ಗೊಳಿಸಲಾಗಿರುತ್ತದೆ. ಈ ಆವೃತ್ತಿಯನ್ನು ಇನ್ನಷ್ಟು |

| | | |
|---|---|---|
| | | ಉನ್ನತೀಕರಣಗೊಳಿಸಲು ಹೊಸ ಆವೃತ್ತಿ Version-2 ತಂತ್ರಾಂಶವನ್ನು ಅಭಿವೃದ್ಧಿಪಡಿಸಿದ್ದು, ಪ್ರಸ್ತುತ ಆವೃತ್ತಿ Version-2 ರ ಮೂಲಕ ಅಬಕಾರಿ ಸೇವೆಗಳನ್ನು ಒದಗಿಸಲಾಗುತ್ತಿದೆ.<br>ಸನ್ನದು ಮಂಜೂರಾತಿ ಸೇವೆಯನ್ನು ತ್ವರಿತವಾಗಿ ಸಾರ್ವಜನಿಕರಿಗೆ ಒದಗಿಸುವ ಉದ್ದೇಶದಿಂದ 16 ರಿಂದ 07 ಹಂತಗಳಿಂದ ಕಡಿತಗೊಳಿಸಲಾಗಿರುತ್ತದೆ.<br><br>ಸರ್ಕಾರವು ಸಂಪನ್ಮೂಲ ಕ್ರೋಢೀಕರಣ ಸಮಿತಿ (Resource Mobilization Commitee) ಅನ್ನು ರಚಿಸಿದ್ದು, ಸದರಿ ಸಮಿತಿಯು ಅಬಕಾರಿ ಇಲಾಖೆಯಲ್ಲಿ ಪಾರದರ್ಶಕತೆ ಮತ್ತು Ease of Doing Business (EODB) ಹೆಚ್ಚಿಸಲು ಸುಧಾರಣಾ ಕ್ರಮಗಳನ್ನು ಸರ್ಕಾರಕ್ಕೆ ಸಲ್ಲಿಸಿದ ನಂತರ ಅದರ ಸಾಧಕ-ಬಾಧಕಗಳನ್ನು ಪರಿಶೀಲಿಸಿ, ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ. |
| ಆ) | 2024-25ನೇ ಸಾಲಿನಲ್ಲಿ ಅಬಕಾರಿ ಇಲಾಖೆಯ ನಿಗದಿಪಡಿಸಿದ ವರಮಾನ ಸಂಗ್ರಹದಲ್ಲಿ ಸುಮಾರು ರೂ. 3000 ಕೋಟಿ ಕೊರತೆ ಉಂಟಾಗಲು ಕಾರಣಗಳೇನು;<br>ಬಿಯರ್ ಮಾರಾಟದಲ್ಲಿ ಶೇ. 20 ರಷ್ಟು ಕುಸಿತ ಕಂಡುಬರಲು ಅವೈಜ್ಞಾನಿಕ ತೆರಿಗೆ ಏರಿಕೆಯೇ ಕಾರಣವಲ್ಲವೇ; | 2024-25ನೇ ಸಾಲಿಗೆ ಅಬಕಾರಿ ಇಲಾಖೆಗೆ ಆಯವ್ಯಯ ಭಾಷಣದಲ್ಲಿ ರೂ. 38,525 ಕೋಟಿಗಳ ಗುರಿಯನ್ನು ನಿಗಧಿಪಡಿಸಿದ್ದು, ನಂತರ ರೂ. 36,500 ಕೋಟಿಗಳಷ್ಟು ಪರಿಷ್ಕೃತ ಗುರಿಯನ್ನು ನಿಗಧಿಪಡಿಸಲಾಗಿರುತ್ತದೆ.<br><br>ಸದರಿ ಸಾಲಿನಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ: FD 03 PES 2024 ದಿನಾಂಕ:23-08-2024 ರಂತೆ, ದಿನಾಂಕ:27-08-2024 ರಿಂದ ಅನ್ವಯವಾಗುವಂತೆ ರಾಜ್ಯದ ಗ್ರಾಹಕರಿಗೆ ಅಗ್ಗದ ದರದಲ್ಲಿ ಮದ್ಯ ದೊರಕುವಂತೆ ಹಾಗೂ ರಾಜ್ಯದ ಮದ್ಯದ ದರ ನೆರೆ ರಾಜ್ಯಗಳಿಗೆ ಹೋಲಿಸಿದಾಗ ತುಲನಾತ್ಮಕವಾಗಿ ಸಮ ಇರುವಂತೆ ಗಮನದಲ್ಲಿಟ್ಟಿಕೊಂಡು ಐ.ಎಂ.ಎಲ್ ಸಂಬಂಧಿಸಿದಂತೆ ಎಲ್ಲಾ 18 ಸ್ಲಾಬ್‌ಗಳನ್ನು ತರ್ಕಬದ್ಧಗೊಳಿಸಿ 16 ಸ್ಲಾಬ್‌ಗಳಿಗೆ ಇಳಿಸಿ, ಮೊದಲ 3 ಸ್ಲಾಬ್ ಗಳಿಗೆ AED ದರಗಳನ್ನು ಬದಲಾವಣೆ ಮಾಡದೇ ಉಳಿದ 13 ಸ್ಲಾಬ್ ಗಳಿಗೆ AED ದರಗಳನ್ನು ಕಡಿಮೆ ಮಾಡಿ ತರ್ಕಬದ್ಧಗೊಳಿಸಲಾಗಿದೆ. ಈ ಬದಲಾವಣೆಯಿಂದ ಹಾಗೂ ಇಲಾಖೆಯ ಕಟ್ಟುನಿಟ್ಟಿನ ಜಾರಿ ಮತ್ತು ತನಿಖಾ ಕ್ರಮಗಳಿಂದ 2024-25 ನೇ ಸಾಲಿನಲ್ಲಿ ಇಲಾಖೆಯು ರೂ.35,783.54 ಕೋಟಿಗಳಷ್ಟು ರಾಜಸ್ವ ಸಂಗ್ರಹಿಸಲಾಗಿರುತ್ತದೆ. 2023-24ನೇ ಸಾಲಿಗೆ ಹೋಲಿಸಿದ್ದಲ್ಲಿ ರೂ. 1,154.54 ಕೋಟಿಗಳಷ್ಟು ಹೆಚ್ಚಿನ ರಾಜಸ್ವ ಸಂಗ್ರಹನೆಯೊಂದಿಗೆ ಶೇ.3.33 ರಷ್ಟು ಧನಾತ್ಮಕ ಬೆಳವಣಿಗೆ ಸಾಧಿಸಲಾಗಿದೆ.<br>2024-25ನೇ ಸಾಲಿನಲ್ಲಿ ಸ್ಲಾಬ್‌ಗಳ ತರ್ಕಬದ್ಧಗೊಳಿಸುವಿಕೆಯಿಂದ ಸೆಮಿ ಪ್ರೀಮಿಯಂ ಮತ್ತು ಪ್ರೀಮಿಯಂ ಮದ್ಯಗಳ ಮಾರಾಟವು ಗಣನೀಯವಾಗಿ |

| | | |
|---|---|---|
| | | ಹೆಚ್ಚಳವಾಗುತ್ತಿದೆ. ಮುಂದಿನ ದಿನಗಳಲ್ಲಿ ಪ್ರೀಮಿಯಂ ಮದ್ಯ ಮಾರಾಟವು ಇನ್ನೂ ಹೆಚ್ಚಳವಾಗುತ್ತದೆಂದು ಅಂದಾಜಿಸಲಾಗಿದೆ.<br><br>ಆಂಧ್ರಪ್ರದೇಶದ ನೂತನ ಅಬಕಾರಿ ನೀತಿಯಿಂದಾಗಿ ಆಂಧ್ರಪ್ರದೇಶದ ಗಡಿಭಾಗಕ್ಕೆ ಹೊಂದಿಕೊಂಡಿರುವ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ, ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಮದ್ಯ ಮಾರಾಟದಲ್ಲಿ ಕುಸಿತಗೊಂಡಿರುವುದರಿಂದ ರಾಜಸ್ವ ಸಂಗ್ರಹಿಸುವಲ್ಲಿ ಕೊರತೆ ಉಂಟಾಗಿರುತ್ತದೆ.<br><br>2024-25ನೇ ಸಾಲಿನಲ್ಲಿ 450.36 ಲಕ್ಷ ಪೆಟ್ಟಿಗೆಗಳು ಬಿಯರ್ ಮಾರಾಟವಾಗಿದ್ದು, 2023-24 ನೇ ಸಾಲಿಗೆ ಹೋಲಿಸಿದ್ದಲ್ಲಿ 6.31 ಲಕ್ಷ ಪೆಟ್ಟಿಗೆಗಳಷ್ಟು ಬಿಯರ್ ನ ಮಾರಾಟವು ಅಧಿಕವಾಗಿದ್ದು, ಶೇ. 1.42 ರಷ್ಟು ಬೆಳವಣಿಗೆಯಾಗಿರುತ್ತದೆ. |
| ಇ) | ನೆರೆ ರಾಜ್ಯವಾದ ಆಂಧ್ರಪ್ರದೇಶದಲ್ಲಿನ ಪಾರದರ್ಶಕ ಅಬಕಾರಿ ನೀತಿಯಿಂದಾಗಿ ಕರ್ನಾಟಕ ಗಡಿ ಜಿಲ್ಲೆಗಳ ವಹಿವಾಟು ಕುಸಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;<br>ಕರ್ನಾಟಕ ರಾಜ್ಯದಲ್ಲಿಯೂ ಅಬಕಾರಿ ಸುಂಕ ತರ್ಕಬದ್ಧಗೊಳಿಸಲು ಮತ್ತು ಸಿಬ್ಬಂದಿ ಕೊರತೆಯನ್ನು ನೀಗಿಸಲು ಸರ್ಕಾರ ಯಾವ ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಿದೆ? | ಹೌದು ಸರ್ಕಾರಕ್ಕೆ ಗಮನಕ್ಕೆ ಬಂದಿರುತ್ತದೆ.<br><br>ಪ್ರಸ್ತುತ ಜಾರಿಯಲ್ಲಿರುವ ತೆರಿಗೆ ಪದ್ಧತಿಯನ್ನು ವಿಶ್ಲೇಷಿಸಿ ರಾಜಸ್ವ ಸಂಗ್ರಹಣೆಯನ್ನು ಹೆಚ್ಚಿಸಲು ಸೂಕ್ತ ಶಿಫಾರಸ್ಸು ಮಾಡಲು ಸರ್ಕಾರವು ಸಂಪನ್ಮೂಲ ಕ್ರೋಢೀಕರಣ ಸಮಿತಿ (Resource Mobilization Commitee) ಅನ್ನು ರಚಿಸಿರುತ್ತದೆ. ಸಂಪನ್ಮೂಲ ಕ್ರೋಢೀಕರಣ ಸಮಿತಿಯ ವರದಿಯು ಸ್ವೀಕೃತವಾದ ನಂತರ ಅದರ ಸಾಧಕ-ಬಾಧಕಗಳನ್ನು ಪರಿಶೀಲಿಸಿ, ಮುಂದಿನ ಕ್ರಮ ಕೈಗೊಳ್ಳಲಾಗುವುದು.<br><br>ಅಬಕಾರಿ ಇಲಾಖೆಯಲ್ಲಿ ಸಿಬ್ಬಂದಿ ಕೊರತೆಯನ್ನು ನೀಗಿಸಲು 942 ಅಬಕಾರಿ ಪೇದೆ, 265 ಅಬಕಾರಿ ಉಪ ನಿರೀಕ್ಷಕರುಗಳ ಹುದ್ದೆಗಳನ್ನು ಕರ್ನಾಟಕ ಲೋಕಾ ಸೇವಾ ಆಯೋಗದ ಮೂಲಕ ಭರ್ತಿ ಮಾಡಲು ಕ್ರಮವಹಿಸಲಾಗುವುದು. |

**ಆಇ 39 ಇಎಲ್‌ಕ್ಯೂ 2026**

(ಆರ್.ಬಿ. ತಿಮ್ಮಾಪೂರ)
**ಅಬಕಾರಿ ಸಚಿವರು**